# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN ; U40109KA2004SGC035177
ನೊಂದಾಯಿತ ಕಛೇರಿ ವಿಳಾಸ ನಂ 29
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆರವರ ಕಛೇರಿ
ವಿಜಯನಗರ 2 ನೇಹಂತ ಮೈಸೂರು-570017
ನಿಗಮ ಇ-ಮೇಲ್ : WWW.CESCMYSORE.ORG

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಸರಗೂರು
Ph.: 08228 – 265678
email:aeecescsarguru@gmail.com


ಸಂಖ್ಯೆ:ಸಕಾನಿಇಂ(ವಿ)/ಸರಗೂರು/ಸಇಂ(ತಾ)/2018-19/ ದಿನಾಂಕ:

ದಿನಾಂಕ 19.12.2018 ರಂದು ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ಶ್ರೀ ಮುಜಾಮಿಲ್ ಖಾನ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸರಗೂರು ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಸುನಿಲ್‌ಕುಮಾರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಹುಣಸೂರು ವಿಭಾಗ,
2. ಶ್ರೀ ಚಿದಂಬರ.ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ., ಸರಗೂರು
3. ಶ್ರೀ ಅಶೋಕ ಟಿ ಬಿ ಕಿರಿಯ ಇಂಜಿನಿಯರ್ (ವಿ) ಶಾಖಧಿಕಾರಿಗಳು ಚಾವಿಸನಿನಿ., ಸರಗೂರು
4. ಶ್ರೀ ದೀಪಕ್ ಡಿ ಕಿರಿಯ ಇಂಜಿನಿಯರ್ (ವಿ) ಶಾಖಧಿಕಾರಿಗಳು ಚಾವಿಸನಿನಿ., ಅಂತರಸಂತೆ
5. ಶ್ರೀ ಶ್ರೀನಿವಾಸ ರಂಗರಾಜು ಕಿರಿಯ ಇಂಜಿನಿಯರ್(ಪ್ರ) ಶಾಖಾಧಿಕಾರಿಗಳು, ಬಿ.ಮಟಕೆರೆ

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.ತದನಂತರದಲ್ಲಿ ಈ ಹಿಂದೆ ದಿನಾಂಕ 01.10.2018 ರಂದು ನಡೆದ ಸಭೆಯಲ್ಲಿ ಸ್ವೀಕೃತವಾದ 11 ಅರ್ಜಿಗಳಲ್ಲಿ 10 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು ಉಳಿದ 1 ಅರ್ಜಿಯನ್ನು ವಿಲೇವಾರಿ ಮಾಡಲು ಅಗತ್ಯ ಕ್ರಮಕೈಗೊಳ್ಳಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದವರಿಗೆ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ತಿಳಿಸಿದರು.

ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು

| ಕ್ರ.ಸಂ | ಅಹವಾಲುದಾರರ ಹೆಸರು ಮತ್ತು ವಿಳಾಸ | ಸಮಸ್ಯೆಗಳ ವಿವರ | ತೆಗೆದುಕೊಂಡ ಕ್ರಮ |
|---|---|---|---|
| 1. | ಮಲ್ಲಪ್ಪ<br>ಕಾಟವಾಳು<br>9663845879 | ಐಪಿ ಪರಿವರ್ತಕ ಕೆಟ್ಟಿದ್ದು, 8 ಬೋರ್‌ವೆಲ್ ಇದ್ದು 3 ಕೆಟ್ಟಿರುತ್ತದೆ ಉಳಿದ 3 ಬೋರ್‌ವೆಲ್‌ಗೆ ವೋಲ್ಟೇಜ್ ತೊಂದರೆ ಇದ್ದು ಸರಿಪಡಿಸಲು ಕೋರಿರುತ್ತಾರೆ. | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್ (ವಿ) ರವರು ಸ್ಥಳ ಪರಶೀಲಿಸಿ ಸೂಕ್ತ ಕ್ರಮ ಶಾಖಾಧಿಕಾರಿಯವರಿಗೆ ಸೂಚಿಸಿರುತ್ತಾರೆ. |
| 2. | ದೊಡ್ಡತಮ್ಮೇಗೌಡ<br>ಚನ್ನೇಗೌಡನಹುಂಡಿ ಗ್ರಾಮ<br>9972030240 | ಐಪಿ ಸೆಟ್‌ಗೆ ಹೋಗಿರುವ ಲೈನ್ ಜೋತಿ ಬಿದ್ದಿದ್ದು ಸರಿಪಡಿಸಲು ಹಾಗೂ ಹೆಚ್ಚುವರಿ ಪರಿವರ್ತಕ ನೀಡಲು ಕೋರಿರುತ್ತಾರೆ. | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಶಾಖಾಧಿಕಾರಿಯವರಿಗೆ ಸೂಚಿಸಿರುತ್ತಾರೆ. |

| | | | |
|---|---|---|---|
| | | | |
| 3. | ಎನ್ ಶಿವಕುಮಾರ್<br>ಕುನ್ನಪಟ್ಣ ಗ್ರಾಮ<br>8453331538 | ಪರಿವರ್ತಕದಿಂದ ಐಪಿಸೆಟ್‌ಗೆ ೩೦ ಕಂಬಗಳಷ್ಟು ದೂರವಿದ್ದು ವೋಲ್ಟೇಜ್ ತೊಂದರೆ ಇದೆ, ಹತ್ತಿರದ ಪರಿವರ್ತಕದಿಂದ ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ. | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು. |
| 4. | ಪ್ರಕಾಶ<br>ಹಾದನೂರು ಗ್ರಾಮ<br>9980752334 | ಹಾದನುರು ಗ್ರಾಮದ ಕುಡಿಯುವ ನೀರಿನ ಪರಿವರ್ತಕ ಕೆಟ್ಟಿದ್ದು ಕುಡಿಯುವ ನೀರಿಗೆ ತೊಂದರೆಯಾಗಿದ್ದು ಸರಿಪಡಿಸಲು ಕೋರಿರುತ್ತಾರೆ. | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಶಾಖಾಧಿಕಾರಿಯವರಿಗೆ ಕೈಗೊಳ್ಳಲು ಸೂಚಿಸಿರುತ್ತಾರೆ |
| 5. | ಎಸ್ ಬಿ ಭೀಮಯ್ಯ<br>ಸರಗೂರು<br>9945908098 | ಬೀರಂಬಳ್ಳಿ ಲೈನ್ ಆಗಿಂದಾಗ್ಗೆ ಕರೆಂಟ್ ಹೋಗುತ್ತಿರುತ್ತದೆ ಸರಿಪಡಿಸಲು ಕೋರಿರುತ್ತಾರೆ. | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ |
| 6 | ಗೋಪಾಲಸ್ವಾಮಿ<br>ನಿಲುವಾಗಿಲು ಗ್ರಾಮ | ನಿಲುವಾಗಿಲು 100 ಕೆವಿಎ ಪರಿವರ್ತಕವನ್ನು ರಸ್ತೆಗೆ ಬದಲಾವಣೆ ಮಾಡಲು ಕೋರಿರುತ್ತಾರೆ ಹಾಗು ಡ್ಯಾಮೇಜ್ ಕಂಬ ಬದಲಿಸಲು ಕೋರಿರುತ್ತಾರೆ. | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಶಾಖಾಧಿಕಾರಿಯವರಿಗೆ ಸೂಚಿಸಿರುತ್ತಾರೆ |
| 7 | ಮಹದೇವಪ್ಪ<br>ತುಂಬಸೋಗೆ ಗ್ರಾಮ<br>9945899636 | ರಾತ್ರಿ ಹೊತ್ತಿನಲ್ಲಿ ಕರೆಂಟ್ ಇರುವುದಿಲ್ಲ ಚಿರತೆ ಭಯ ಇದ್ದು ರಾತ್ರಿ ಹೊತ್ತಿನಲ್ಲಿ ಕರೆಂಟ್ ನೀಡಲು ಕೋರಿರುತ್ತಾರೆ. | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಶೀಲಿಸಲು ಶಾಖಾಧಿಕಾರಿಯವರಿಗೆ ಕೈಗೊಳ್ಳಲು ಸೂಚಿಸಿರುತ್ತಾರೆ |
| 8 | ಖ ಜೆ ಶಿವಣ್ಣ<br>ದೇವಲಾಪುರ | ಕೂಸೇಗೌಡನಹುಂಡಿ ಗ್ರಾಮದ ಜಮೀನಿನಲ್ಲಿ 2 ಪರಿವರ್ತಕಗಳಿದ್ದು ರಸ್ತೆಗೆ ಬದಲಾವಣೆ ಮಾಡಲು ಕೋರಿರುತ್ತಾರ | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಶೀಲಿಸಿ ಸೂಕ್ತ ಕ್ರಮ ಶಾಖಾಧಿಕಾರಿಯವರಿಗೆ ಕೈಗೊಳ್ಳಲು ಸೂಚಿಸಿದರು. |
| 9 | ಬಿ ಪಿ ಪಾಲಾಕ್ಷ<br>ಬಿಡಗಲು<br>ಸರಗೂರು ಟೌನ್<br>9696857306 | ಹೆಬಲಗುಪ್ಪೆ ಲೈನ್ ಐಪಿ ಸೆಟ್ ಗಳಿಗೆ ಆಗಿಂದಾಗ್ಗೆ ಕರೆಂಟ್ ಹೋಗುತ್ತಿರುತ್ತದೆ ಸರಿಪಡಿಸಲು ಕೋರಿರುತ್ತಾರೆ. | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಶೀಲಿಸಿ ಸಮಸ್ಯೆ ಬಗೆಹರಿಸಲು ಶಾಖಾಧಿಕಾರಿಯವರಿಗೆ ಕೈಗೊಳ್ಳಲು ಸೂಚಿಸಿದರು. |
| 10 | ಶಿವಲಿಂಗಯ್ಯ<br>ಯಶವಂತಪುರ<br>9743518449 | ಹೆತ್ತಗೆ ಗ್ರಾಮಕ್ಕೆ ಹೊಸದಾಗಿ ಬೀದಿದೀಪ ನಿರ್ವಹಣೆ ಅಡಿ ವಿದ್ಯುತ್ ಕಂಬ ಮತ್ತಿ ತಂತಿ ಅಳವಡಿಸಲಿ ಕೋರಿರುತ್ತಾರೆ ಹಾಗೂ ಯಶವಂತಪುರ ಗ್ರಾಮದ ಮಂಜುನಾಥ್ ರವರ ಮನೆ ಹತ್ತಿರ ಶಿಥಿಲಗೊಂಡಿರುವ ಕಂಬವನ್ನು ಸರಿಪಡಿಸಲು ಕೋರಿರುತ್ತಾರೆ. | ಮಾನ್ಯ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಶಾಖಾಧಿಕಾರಿಯವರಿಗೆ ಸೂಚಿಸಿರುತ್ತಾರೆ |

ಸಭೆಯ ಕೊನೆಯಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್‌ರವರು ವಿದ್ಯುತ್ ಗ್ರಾಹಕರಿಂದ ಕೇಳಿಬಂದಂತಹ ದೂರುಗಳು ಹಾಗೂ ಕುಂದುಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಮಾನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಸರಗೂರು.

ಪ್ರತಿಗಳು:-

1. ಮಾನ್ಯ ಪ್ರಧಾನ ವ್ಯವಸ್ಥಾಪಕರು (ಅ ಮತ್ತು ಮಾಸಂ),ಚಾವಿಸನಿನಿ ನಿಗಮ ಕಛೇರಿ ಮೈಸೂರುರವರ ಮಾಹಿತಿಗಾಗಿ
2. ಮಾನ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),ಚಾವಿಸನಿನಿ ನಿಗಮ ಕಛೇರಿ ಮೈಸೂರುರವರ ಮಾಹಿತಿಗಾಗಿ
3. ಮುಖ್ಯ ಇಂಜಿನಿಯರ್ (ವಿ), ಚಾವಿಸನಿನಿ, ವಲಯ ಕಛೇರಿ ಮೈಸೂರು ರವರ ಮಾಹಿತಿಗಾಗಿ
4. ಅಧೀಕ್ಷಕ ಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರುರವರ ಮಾಹಿತಿಗಾಗಿ
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗಿಯ ಕಛೇರಿ,ಹುಣಸೂರುರವರ ಮಾಹಿತಿಗಾಗಿ.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ನೋಡಲ್ ಅಧಿಕಾರಿ 220 ಕೆವಿ ಸ್ವೀಕರಣಾ ಕೇಂದ್ರ ಕಡಕೋಳ.